ಕರ್ನಾಟಕ ವಿಧಾನ ಸಭೆ

ಬುಧವಾರ, 24ನೇ ಆಗಸ್ಟ್ 1983/ಭಾದ್ರಪದ 2, 1905

ವಿಧಾನ ಸೌಧದಲ್ಲಿರುವ ವಿಧಾನ ಸಭೆಯು ಸದನದ ಸಂಭಾಗಣದಲ್ಲಿ ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅಧ್ಯಕ್ಷ ಪೀಠವನ್ನಲಂಕರಿಸಿದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಕೊಡಲಾದ ಉತ್ತರಗಳು

ವಿಷಯ :– ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನಲ್ಲಿರುವ ಕೊಳವೆ ಬಾವಿಗಳು

ಪ್ರ. 134 (92) ಶ್ರೀ ಹೆಗಲಪ್ಪ ಲಮಾಣಿ (ಬ್ಯಾಡಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಸರಕಾರವು ಅಧಿಕಾರ ವಹಿಸಿಕೊಂಡನಂತರ 10–1–83 ರಿಂದ ಈವರೆಗೆ ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಿಸಿದೆ ?

ಶ್ರೀ ಎಂ.ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಮಂತ್ರಿಗಳ ಪರವಾಗಿ ;—

ಅ. ಪ್ರಚಲಿತ ಸರಕಾರವು ಅಧಿಕಾರ ವಹಿಸಿಕೊಂಡ ನಂತರ ಅಂದರೆ 10–1–83 ರಿಂದ 31–7–83ರ ವರೆಗೆ 50 ಕೊಳವೆ ಬಾವಿಗಳನ್ನು ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನಲ್ಲಿ ತೋಡಲಾಗಿದೆ;

ಶ್ರೀ ಲಮಾಣಿ ಹೆಗ್ಗಪ್ಪ ದೇಶಪ್ಪ.—ನಾನು ಕೇಳಿದ ಪ್ರಶ್ನೆಯ ರೂಪವೇ ಬೇರೆ. ನಾನು ಪ್ರಶ್ನೆಯನ್ನು ಕೇಳಿದ್ದ ಉದ್ದೇಶವೇನೆಂದರೆ, ಕನಕಪುರದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಿದ್ದಾರೆ ಎಂದು ತಿಳಿಯುವುದಕ್ಕೆ. ಆದರೆ ಬ್ಯಾಡಗಿಯಲ್ಲಿ ಈವರೆಗೆ ಕೇವಲ 50 ಬಾವಿಗಳನ್ನು ಮಾತ್ರ ತೋಡಿದ್ದಾರೆ. ಮತ್ತು ಕನಕಪುರ ತಾಲ್ಲೂಕಿನಲ್ಲೂ ಕೂಡ ಲಂಬಾಣಿ ತಾಂಡಗಳು ಇವೆ. ಅಲ್ಲೂ ಬಾವಿಗಳನ್ನು ತೋಡಿದ್ದಾರೆಯೇ ಎಂಬುದರ ಬಗ್ಗೆ ವಿವರಣೆ ಬೇಕು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮಾಭಿವೃದ್ಧಿ ಹಾಗೂ ಪಂಚಾಯಿತ್ ರಾಜ್ ಮಂತ್ರಿಗಳ ಪರವಾಗಿ).—ಸನ್ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆ ಬ್ಯಾಡಗಿ ಕ್ಷೇತ್ರಕ್ಕೆ ಸಂಬಂಧಪಟ್ಟದ್ದಾದ್ದರಿಂದ, ಅದಕ್ಕೆ ಉತ್ತರವನ್ನು ಒದಗಿಸಲಾಗಿದೆ. ಕನಕಪುರದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಿಸಿದ್ದಾರೆಂಬುದು ಈ ಪ್ರಶ್ನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲವಾದ್ದರಿಂದ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವನ್ನು ಒದಗಿಸಲಾಗುವುದು. ಬ್ಯಾಡಗಿ ತಾಲ್ಲೂಕಿನಲ್ಲಿ ಬರಗಾಲದ ನಿಮಿತ್ತ ತೆಗೆದುಕೊಂಡಂತಹ ಕಾರ್ಯಕ್ರಮಗಳಲ್ಲಿ 240 ಕೊಳವೆ ಬಾವಿಗಳನ್ನು ತೋಡಲಾಗಿದೆ. ಆ 240 ಕೊಳವೆ ಬಾವಿಗಳಿಗೂ ಕೂಡ ನಳವನ್ನೂ ಅಳವಡಿಸಲಾಗಿದೆ. ಈಗಿನ ಸರ್ಕಾರ ಅಧಿಕಾರವನ್ನು ವಹಿಸಿಕೊಂಡ 6 ತಿಂಗಳೊಳಗಾಗಿ (10–1–83 ರಿಂದ 31–7–83ರ ವರೆಗೆ) 50 ಕೊಳವೆ ಭಾವಿಗಳನ್ನು ತೋಡಲಾಗಿದೆ. ಒಟ್ಟು 220 ಭಾವಿಗಳಿಗೂ ಕೈ ಪಂಪುಗಳನ್ನು ಹಾಕಲಾಗಿದೆ. ಇದರಲ್ಲಿ ಅಲಕ್ಷ್ಯ ಮಾಡುವ ಪ್ರಶ್ನೆ ಬರುವುದಿಲ್ಲ.

ಶ್ರೀ ಲಮಾಣಿ ಹೆಗ್ಗಪ್ಪ ದೇಶಪ್ಪ.—ಲಂಬಾಣಿ ತಾಂಡಾಗಳಿಗೂ ಕೊಳವೆ ಬಾವಿಗಳನ್ನು ಹಾಕಿದ್ದೀರಾ ? ಹಿಂದಿನ ಬಾಕಿಯನ್ನು ತೆಗೆದುಬಿಟ್ಟು, ಮುಂದೆ ಬಾಕಿ ಎಷ್ಟು ತಾಂಡಾಗಳಲ್ಲಿ ಭಾವಿಗಳನ್ನು ತೋಡಬೇಕಾಗಿದೆ. ಇಂತಹ ಎಷ್ಟು ತಾಂಡಾಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಹಾಕಿದ್ದೀರಿ ? ಎಲ್ಲಾ ತಾಂಡಾಗಳಿಗೂ ಹಾಕಿದ್ದೀರಾ ?

ಶ್ರೀ ಎಂ.ಪಿ. ಪ್ರಕಾಶ್.—ಈಗ ಕೊಟ್ಟಿರತಕ್ಕಂತಹ ಪ್ರಶ್ನೆಯ ವ್ಯಾಪ್ತಿಯನ್ನು ಅನುಸರಿಸಿ ಉತ್ತರವನ್ನು ಕೊಡಲಾಗಿದೆ. ಮಾನ್ಯ ಸದಸ್ಯರು ಇದಕ್ಕೆ ಮತ್ತೊಂದು ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವನ್ನು ಒದಗಿಸಲಾಗುವುದು.

ವಿಷಯ :–ವ್ಯವಸಾಯ ಕಾಲೇಜನ್ನು ಮೂಡಿಗೆರೆಯಲ್ಲಿ ಪ್ರಾರಂಭಿಸುವ ಬಗ್ಗೆ.

ಪ್ರ. 135(33) ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).—ಮಾನ್ಯ ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಮೂಡಿಗೆರೆಯಲ್ಲಿ ಪ್ರಾದೇಶಿಕ ಸಂಶೋಧನಾಲಯಕ್ಕೆ (ಆರ್. ಆರ್. ಎಸ್.) ಹೊಂದಿ ಕೊಂಡಂತೆ ಒಂದು ವ್ಯವಸಾಯ ಕಾಲೇಜನ್ನು ಪ್ರಾರಂಭಿಸುವರೆ ?

ಶ್ರೀ ಬಿ.ಎಲ್. ಗೌಡ (ಕೃಷಿ ಮಂತ್ರಿಗಳು) :—

ಅ. ಇಲ್ಲ ;

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ವಿಷಯ :—ರಾಜ್ಯದಲ್ಲಿ ಪಂಚಾಯಿತಿಗಳ ಸಿಬ್ಬಂದಿಗಾಗಿ ಸಮಾನ ಕಾನೂನುಗಳು.

ಪ್ರ. ಸಂಖ್ಯೆ 137(63) ಡಾ॥ ವಿ.ಎಸ್. ಆಚಾರ್ಯ (ಉಡುಪಿ).—(ಡಾ॥ ವಿ.ಎಸ್. ಆಚಾರ್ಯ ರವರ ಬದಲು ಶ್ರೀ ಕೆ. ರಾಮಭಟ್‌ರವರು ಪ್ರಶ್ನೆಯನ್ನು ಕೇಳಿದರು).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ರಾಜ್ಯದ ಪಂಚಾಯತ್ ಸಿಬ್ಬಂದಿಗಳ ಸಂಬಳ ಸಾರಿಗೆ ಸೇವಾ ಸೌಲಭ್ಯಗಳ ಸಮಾನ ವ್ಯವಸ್ಥೆಯ ಬಗ್ಗೆ ಕಾನೂನು ರಚಿಸಲು ಸರಕಾರದವರಲ್ಲಿ ಸಲಹೆ ಏನಾದರೂ ಇದೆಯೆ ;

ಆ. ಹಾಗಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :—

1. ಇಲ್ಲ.

2. ಈ ಪ್ರಶ್ನೆ ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಕೆ. ರಾಮಭಟ್.—ಈ ಪಂಚಾಯಿತಿ ನೌಕರರಿಗೆ ಸಂಬಂಧಪಟ್ಟಂತೆ ಯೂನಿಫಾರ್ಮಿಟಿ ಇಲ್ಲ. ಇದರ ಬಗ್ಗೆ ಸರ್ಕಾರದ ನೀತಿ ಏನು ?

(ಸಾರಿಗೆ ರಾಜ್ಯಸಚಿವರು ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾತ್‌ರಾಜ್ಯ ಮಂತ್ರಿಗಳ ಪರವಾಗಿ.) ಶ್ರೀ ಎಂ.ಪಿ. ಪ್ರಕಾಶ್.—ಸಮಗ್ರ ಜಿಲ್ಲಾ ಪರಿಷತ್, ಮಸೂದೆ ಸದನದ ಮುಂದೆ ಇದೆ. ಆ ಮಸೂದೆಯನ್ನು ಜಾರಿಗೆ ತರುವಂತಹ ಸಂದರ್ಭದಲ್ಲಿ ಈ ಎಲ್ಲ ವಿಚಾರಗಳ ಬಗ್ಗೆಯೂ ವಿಚಾರ ಮಾಡ ಬಹುದಾಗಿದೆ. ಕೆಲವು ಪಂಚಾಯಿತಿಗಳಲ್ಲಿ ಪಾರ್ಟ್ ಟೈಂ ಕಾರ್ಯದರ್ಶಿಗಳು ಇದ್ದಾರೆ. ಕೆಲವು ಕಡೆ ಪೂರ್ಣಾವಧಿಯ ಕಾರ್ಯದರ್ಶಿಗಳು ಇದ್ದಾರೆ. ಈ ಕಾಯಿದೆ ಪ್ರಕಾರ ಅವರಿಗೂ ಎಲ್ಲ ರೀತಿಯ ಸೇವಾ ಸೌಲಭ್ಯಗಳನ್ನು ಕಲ್ಪಿಸಿಕೊಡತಕ್ಕಂತಹ ಯೋಚನೆ ಸರ್ಕಾರಕ್ಕೆ ಇದೆ.

ಶ್ರೀ ಪಿ. ರಾಮಚಂದ್ರರಾವ್.—ನಮ್ಮ ತಾಲ್ಲೂಕಿನಲ್ಲಿರತಕ್ಕಂತಹ ಪಂಚಾಯಿತಿ ಸಿಬ್ಬಂದಿಗೆ ಕಾರ್ಪೊರೇಷನ್‌ನಿಂದ ಸಂಬಳವನ್ನು ಕೊಡುತ್ತಿದ್ದಾರೆ. ಅವರು ಕಾರ್ಪೊರೇಷನ್ ಎಂಪ್ಲಾಯಿಸೇ ?

ಶ್ರೀ ಎಂ.ಪಿ. ಪ್ರಕಾಶ್.—ಈ ಪ್ರಶ್ನೆ ಮುಖ್ಯ ಪ್ರಶ್ನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಮತ್ತೊಂದು ಪ್ರಶ್ನೆಯನ್ನು ಕಳುಹಿಸಿದರೆ ಉತ್ತರವನ್ನು ಒದಗಿಸಲಾಗುವುದು.

ವಿಷಯ :— ತುರುವೇಕೆರೆ ತಾಲ್ಲೂಕಿನಲ್ಲಿರುವ ಗ್ರಾಮಾಂತರ ಪಶುವೈದ್ಯಶಾಲೆಗಳ ಸಂಖ್ಯೆ ಮತ್ತು ಹೊಸ ಪಶು ವೈದ್ಯಶಾಲೆಗಳನ್ನು ಮಂಜೂರು ಮಾಡುವ ಬಗೆ.

ಪ್ರ. 138(34) ಶ್ರೀ ಭೈರಪ್ಪಾಜಿ (ತುರುವೇಕೆರೆ).—ಮಾನ್ಯ ಪಶುವೈದ್ಯ, ಪಶುಸಂಗೋಪನಾ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ತುರುವೇಕೆರೆ ತಾಲ್ಲೂಕಿನಲ್ಲಿರುವ ಗ್ರಾಮಾಂತರ ಪಶುವೈದ್ಯಶಾಲೆಗಳ ಸಂಖ್ಯೆ ಎಷ್ಟು ;

ಆ. ಹಾಲಿ ಇರುವ ಗ್ರಾಮಾಂತರ ಪಶುವೈದ್ಯಶಾಲೆಗಳು ಸಾಕಾಗುವುದಿಲ್ಲವೆಂದು ಹೊಸದಾಗಿ 4 ಗ್ರಾಮಾಂತರ ಪಶುವೈದ್ಯಶಾಲೆಗಳನ್ನು ಮಂಜೂರು ಮಾಡಬೇಕೆಂದು ಕ್ಷೇತ್ರದ ಶಾಸಕರಿಂದ ಮನವಿ ಬಂದಿರುವುದು ನಿಜವೇ ;

ಇ. ಹಾಗಿದ್ದಲ್ಲಿ ಹೊಸ ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಶ್ರೀ ವಿಶ್ವನಾಥರೆಡ್ಡಿ (ಮುದ್ನಾಳ್) ಪಶುಸಂಗೋಪನೆ, ಮತ್ತು ವೈದ್ಯಸೇವೆ ಮತ್ತು ತೋಟಗಾರಿಕೆ ಮಂತ್ರಿಗಳು) :—

ಅ. 5 ಪಶುವೈದ್ಯಶಾಲೆಗಳು.
2 ಗ್ರಾಮಾಂತರ ಪಶುವೈದ್ಯಶಾಲೆಗಳು.

ಆ. ನಿಜ.

ಇ. ಸದ್ಯಕ್ಕೆ ಇಲ್ಲ.

ಶ್ರೀ ಬಿ. ಭೈರಪ್ಪಾಜಿ.—ಸನ್ಮಾನ್ಯ ಅಧ್ಯಕ್ಷರೇ, ಹೊಸದಾಗಿ 4 ಗ್ರಾಮಾಂತರ ಪಶುವೈದ್ಯಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಆದಷ್ಟು ಬೇಗ ಕ್ರಮ ಕೈಗೊಳ್ಳುವುದು ಉಚಿತವಲ್ಲವೇ ಎಂದು ನಾನು ಕೇಳುತ್ತೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಈಗ ಸದ್ಯಕ್ಕೆ ನಮ್ಮ ಇಲಾಖೆಯಲ್ಲಿ 771 ಲೈವ್‌ಸ್ಟಾಕ್‌ಮನ್ ಮತ್ತು 720 ಕಾಂಪೌಂಡರ್ಸ್ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ತುಂಬುವವರೆಗೂ